ಯುರೋಪು, ಅಮೆರಿಕ, ಏಶಿಯಾದ ದೇಶಗಳಲ್ಲಿ ನಿಷೇಧಿಸಲಾಗಿದ್ದ ಕೀಟನಾಶಕವನ್ನು ಭಾರತದಲ್ಲಿ ಬಳಸಲು ಯೋಗ್ಯವೆಂದು ಶಿಫಾರಸ್ಸು ಮಾಡಿದ್ದು. ಈ ಕೀಟನಾಶಕದಿಂದ ರೈತರು ಅಂಗವಿಕಲರಾದರು, ಚರ್ಮರೋಗಕ್ಕೆ ತುತ್ತಾದರು. ವಾಸನೆಯಿಂದಲೇ ಹಲವರು ಸತ್ತರು. ಈ ಬೆಳವಣಿಗೆ ಅವನ ಮನೋಕಾಯಿಲೆಗೆ ಕಾರಣವಾಗಿದೆ. ಹತ್ತು ಕೋಟಿ ರೂಪಾಯಿಗಳ ಲಾಭದ ಆಮಿಷ ಅವನಿಂದ ಇಂಥ ಕೃತ್ಯ ಮಾಡಿಸಿದೆ. ಆತನೀಗ ಅರೆಜೀವ ಹಿಡಿದ ಕಣ್ಣುಗಳಿಂದ ಪೂಜಾರಿಯ ಎದುರು ನಿತ್ರಾಣಗೊಂಡು ನಿಂತಿರುವನು. ಅವನ ದೇಹವನ್ನು ಹಲವು ಪ್ರಯೋಗಗಳಿಗೆ ಒಡ್ಡಿದ ಪೂಜಾರಿಗೆ ಆತನ ಬಾಯಿ ಬಿಡಿಸಲು ಸಾಧ್ಯವಾಗುತ್ತಿಲ್ಲ. ಚಪ್ಪಲಿಯಿಂದ ಹೊಡೆದು ಅವನ ಭೂತ ಬಿಡಿಸಲು ಹೆಣಗಾಡಿದ. ವಿಜ್ಞಾನಿ ಅಪಮಾನದಿಂದ ಕುಸಿದು 'ನಾನು ಕೊಲೆಗಾರ, ನಾನು ಕೊಲೆಗಾರ' ಎಂದು ಕೂಗಾಡಿ ಅಳತೊಡಗಿದ. 'ನಾನು ಪಾಪಿ, ನಾನು ದುಷ್ಟ' ಎಂದು ಅಲವತ್ತುಕೊಂಡ. ವಿಜ್ಞಾನದ ಸುತ್ತ ಇರುವ ನೈತಿಕ ಪ್ರಶ್ನೆಗಳನ್ನೂ ಈ ಕಥೆ ಕೇಳಿದೆ. ಕಥೆಯಲ್ಲಿ ಬರುವ ಬೆಡಗಿನ ವಚನಗಳು ಕಥೆಯ ಒಟ್ಟು ವಾತಾವರಣಕ್ಕೆ ಪೂರಕವಾಗಿ ಬಂದಿವೆ.

ಇದೇ ದಾರಿಯಲ್ಲಿ ಸಾಗುವ ಇನ್ನೊಂದು ಕಥೆ 'ಧರಣಿಯ ಮೇಲಿನ ದಾಳಿ'. ಪಂಜಾಬಿಗಳು ನಡೆಸುವ ಆಫ್ರಿಕಾದ ಫಾರ್ಮ್‌ನಲ್ಲಿ ಮ್ಯಾನೇಜರ್ ಆಗಿರುವ ಭಾರತೀಯ ವ್ಯಕ್ತಿಯೊಬ್ಬನ ಕಥೆಯಿದು. ಎರಡು ಸಾವಿರ ಪುನುಗು ಬೆಕ್ಕುಗಳನ್ನು ಸಾಕುವ ಜವಾಬ್ದಾರಿ ಇವನದು. ಪುನುಗು ಬೆಕ್ಕುಗಳಿಗೆ ಕಾಫಿ ಹಣ್ಣನ್ನು ತಿನ್ನಿಸುವುದು, ಅವುಗಳ ಅಮೇಧ್ಯದಲ್ಲಿ ಬರುವ ಬೀಜಗಳನ್ನು ಬೇರ್ಪಡಿಸಿ–ಸಂಸ್ಕರಿಸಿ ಮಾರುಕಟ್ಟೆಗೆ ಬಿಡುವುದು ಇವನ ಕೆಲಸ. ಬೆಕ್ಕಿನ ವಿಸರ್ಜನೆಯೊಂದಿಗೆ ಬರುವ ಕಾಫೀ ಬೀಜಗಳಿಗೆ ಮಾರುಕಟ್ಟೆಯಲ್ಲಿ ವಿಶೇಷ ಬೆಲೆಯಿದೆ. ಮನುಷ್ಯರ ಹಸಿವು, ತೃಷೆ ನೀಗಿಸಲು ಕೃಷಿ ವಿಜ್ಞಾನಿಗಳು ಹೊಸ ಪ್ರಯೋಗಗಳನ್ನು ಕಂಡುಕೊಂಡಿದ್ದಾರೆ. ಇದಕ್ಕಾಗಿ ನಿಸರ್ಗದ ಯಾವ ಜೀವಿಯನ್ನಾದರೂ ಅವರು ಬಳಸಿಕೊಳ್ಳಬಲ್ಲರು. ಇದು ಬೆಕ್ಕಿನ ಜೀವಕ್ಕೂ ಮಾರಕ, ಮನುಷ್ಯರ ಜೀವಕ್ಕೂ ಮಾರಕ. ಆದರೆ ಏನು ಮಾಡುವುದು? ಲಾಭದ ಎದುರು ಎಲ್ಲಾ ಮೌಲ್ಯಗಳು ತಲೆಕೆಳಗಾಗುವ ದುರಂತವನ್ನು ಈ ಕಥೆ ಮಾರ್ನುಡಿದಿದೆ. ಯಥೇಚ್ಛ ಚುಚ್ಚುಮದ್ದುಗಳ ಅಡ್ಡಪರಿಣಾಮಗಳಿಂದ ದಿನಾಲು ಐದಾರು ಬೆಕ್ಕುಗಳು ಸಾಯುತ್ತಿವೆ. ಈ ಬೆಕ್ಕುಗಳು ಒದ್ದಾಡಿ ಸಾಯುವುದನ್ನು ಹತ್ತಿರದಿಂದ ಕಂಡಿದ್ದ ಇವನ ಮನಸ್ಸು ಸ್ಥಿಮಿತ ಕಳೆದುಕೊಂಡಿದೆ.

ಮನೋಕ್ಲೇಶದಿಂದ ನರಳುವ ಪಾತ್ರಗಳೇ ಮಹಾಂತೇಶರ ಕಥೆಗಳಲ್ಲಿ ಅಧಿಕ. ಬೆಕ್ಕುಗಳ ಸಾವಿನಿಂದ ಉತ್ಪಾದನೆ ಕಡಿಮೆಯಾಗಿದೆ. ಇದರಿಂದ ಕುಪಿತನಾದ ಮಾಲೀಕ 'ಪ್ರೊಡಕ್ಷನ್ ಕಮ್ಮಿಯಾದರೆ ನೀನೇ ಕಾಫಿ ಬೀಜಗಳನ್ನು ತಿಂದು ವಿಸರ್ಜಿಸಬೇಕಾದೀತು' ಅಂತ ಎಚ್ಚರಿಕೆ ಕೊಟ್ಟಿದ್ದಾನೆ. ಮನುಷ್ಯರ ಇಂಥ ಕ್ರೌರ್ಯ ಮಾತನ್ನು ಮೀರಿದ್ದು. ಆತನ ಪಾಸ್‌ಪೋರ್ಟ್, ವೀಸಾ ಜಪ್ತಿ ಮಾಡುವುದಾಗಿ ಹೆದರಿಸಲಾಗಿದೆ. ಎಚ್ಚರದಲ್ಲಿ ಮಾತ್ರವಲ್ಲ, ಕನಸಿನಲ್ಲೂ ಆತ ನರಳತೊಡಗಿದ್ದಾನೆ. ಆಧುನಿಕ ಕಾಲದ ಮಾರುಕಟ್ಟೆ ಪ್ರೇರಿತ ಜಗತ್ತು ಮನುಷ್ಯರ ಚೈತನ್ಯವನ್ನು ಮುರುಟಿಹಾಕಿದೆ. ಈ ಭೂಮಿ ಕೇವಲ ಮನುಷ್ಯರದೆ? ಎಂಬ ಪ್ರಶ್ನೆಯನ್ನೂ ಇಲ್ಲಿನ ಕಥೆಗಳು ಕೇಳಿಕೊಂಡಿವೆ. 'ಈ ಭೂಮಿ ನಿನ್ನದಲ್ಲ' ಕಥೆ ಭೂಮಿಯೊಂದಿಗೆ ನಡೆಸುತ್ತಿರುವ ಅನೈಸರ್ಗಿಕ ಪ್ರಯೋಗಗಳನ್ನು ಕಾಣಿಸಿದೆ. ಜೀವಾಣುಗಳ ನಾಶ, ವಾಯುಮಂಡಲದ ನಾಶ, ಮಣ್ಣಿನ ಫಲವತ್ತತೆಯ ನಾಶ ನಮ್ಮನ್ನು ಎಲ್ಲಿಗೆ ಕರೆದೊಯ್ಯಬಲ್ಲವು ಎಂದು ಕೇಳುತ್ತಿವೆ. ಬಂಜರು ಬಂಜರು ಬಂಜರು ಎಂಬ ಪದ ಮಾತ್ರ ಕಥೆಯಲ್ಲಿ ಅನುರಣಿಸುತ್ತಿದೆ. ಭೂಮಿಯ ಬಂಜರನ್ನೂ, ಮನಸ್ಸಿನ ಬಂಜರನ್ನೂ ಒಟ್ಟಿಗೆ ಕಾಣಿಸಿದ್ದು ಈ ಕಥೆಗಳ ಇನ್ನೊಂದು ಮುಖ್ಯ ಗುಣ.

ಈ ಮೇಲಿನ ಕಥೆಯಲ್ಲಿ ಫ್ಲೋರಿಡಾದ ಅಮೆರಿಕನ್ ಅಗ್ರಿ ರಿಸರ್ಚ್ ಸೆಂಟರಿನಲ್ಲಿ ಕೆಲಸ ಮಾಡುತ್ತಿರುವ ರಾಯಚೂರಿನ ಕೃಷಿ ವಿಜ್ಞಾನಿ ಅಮರೇಶ್ ಇಂಥದ್ದೇ ಮನೋಕ್ಲೇಶದಲ್ಲಿ ನರಳಿ ರಾಜೀನಾಮೆ ಕೊಟ್ಟು ಹೊರಬಂದ. ತನಗೆ ಕೊಟ್ಟ ಕೆಲಸ ತನ್ನ ದೇಶದ ರೈತರಿಗೆ ಮಾರಕವೆಂಬುದು ಆತನಿಗೆ ಅರಿವಾಗಿದೆ. ಆತನಿಗೆ ವಹಿಸಿದ ಕೆಲಸ